


**ಲೇ: ಡಾ. ವಿನಾಯಕ ರಾ.ಕಮತದ**
ಬೆಲೆ: 100
ಪ್ರ: ಸುಭಾಷಿಣಿ ಪ್ರಕಾಶನ, ಗದಗ
ಮೊ: 9742685284




**ಲೇ: ಗುಂಡುರಾವ್ ದೇಸಾಯಿ**
ಬೆಲೆ: ರೂ. 250
ಪ್ರ: ಅಭಿನವ, ಬೆಂಗಳೂರು
ಮೊ: 9448804905

ಪಾತರಗಿತ್ತಿಯ ಬಗೆಗೆ ವಿಶೇಷ ಗಮನ ಹರಿಸಿದ ಪರಿಣಾಮ 'ಪಾತರಗಿತ್ತಿ ಬಾರೆ ನಿಂಗೊಂದ ಅಂಗಿ ಹೊಲದೀನಿ/ ಇರ್ಲಿ ಅಂತ ನನ್ನ ನಿನ್ನ ಹೆಸರೂ ಬರೆದೀನಿ' ಎನ್ನುವ ಸೊಗಸಾದ ಕಲ್ಪನೆಯೇ ಕಾಳಜಿಯಾಗಿ ಕಾಣುತ್ತದೆ. ಮಳೆಯ ಹನಿಗಳನ್ನು ಕರೆಯುತ್ತಾ, 'ಇಳೆಯ ಒಳಗೆ ಇಳಿದು ಹಸಿರ ಕೊಡೆಯ ಹಿಡಿಯೇ' ಎಂಬ ಸಾಲುಗಳು ಕೊಡೆಯ ವಿಸ್ತಾರವನ್ನು ಹೆಚ್ಚಿಸುತ್ತದೆ. ಹೀಗೆ ಸೂಕ್ಷ್ಮಗಳನ್ನು ಪದ್ಯದ ವಸ್ತುವಿಗೆ ಆಯ್ದುಕೊಳ್ಳುವ ಇವರು, ಆಡು ಭಾಷೆಯನ್ನು ದುಡಿಸಿಕೊಳ್ಳುವ ಸೃಜನಶೀಲತೆ ರೂಢಿಸಿಕೊಂಡಿದ್ದಾರೆ. ಸಂಕಲನದಲ್ಲಿ ಐವತ್ತೊಂದು ಪದ್ಯಗಳಿದ್ದು, ಬಹುತೇಕ ಎಲ್ಲ ಪದ್ಯಗಳೂ ಪ್ರೀತಿಯ ಓದನ್ನು ಉಣಿಸಿ, ಗುನುಗುನಿಸಲು ಹಚ್ಚುತ್ತವೆ.

## ಸೊಳ್ಳೆ ಫ್ರೆಂಡು ಒಳ್ಳೆ ಫ್ರೆಂಡು...

ಸೊಳ್ಳೆಯಂತಹ ಕನಿಷ್ಠ ಜೀವಿಯೊಂದು ಈ ಕಾದಂಬರಿಯ ತುಂಬಾ ಮುಖ್ಯ ಪಾತ್ರವಾಗಿ ಓಡಾಡಿದೆ. ಸೊಳ್ಳೆ ಮಾತಾಡುವ ಸಾಹಸ ಮಾಡಿದೆ, ಹೀರೋ ಆಗಿ ಮೆರೆದಿದೆ. ಪಾಶ್ಚಾತ್ಯ ಸಾಹಿತ್ಯದಲ್ಲಿ ಕಂಡುಬರುವಂತ ಫ್ಯಾಂಟಸಿ ಕನ್ನಡದಲ್ಲೂ ಪ್ರಯೋಗವಾಗಿದೆ ಎಂಬುದಕ್ಕೆ ಆನಂದ ಪಾಟೀಲರ 'ಪುಟ್ಟಾರಿ ಆನೆ ಪುಟ್ ಪುಟ್' ಹಾಗೂ ಗುಂಡುರಾವ್ ಅವರ 'ಸೊಳ್ಳೆ ಫ್ರೆಂಡು ಒಳ್ಳೆ ಫ್ರೆಂಡು...' ಉತ್ತಮ ನಿದರ್ಶನಗಳಾಗಿವೆ. ಮಕ್ಕಳ ಬದುಕಿನ ಸ್ವಾರಸ್ಯ ಪ್ರಸಂಗಗಳು, ಇಷ್ಟವಾಗುವ ನವಿರಾದ ಹಾಸ್ಯ, ರಾಯಚೂರಿನ ಭಾಷಾ ಸೊಗಡುಗಳು ಕಾದಂಬರಿಯನ್ನು ಆಪ್ತವಾಗಿಸುತ್ತವೆ. ಓದುಗರನ್ನು ಸೆಳೆದು ಆವರಿಸಿಕೊಳ್ಳುವ ಈ ಕಾದಂಬರಿ ಸೊಳ್ಳೆಯ ಮೂಲಕ ಗೆಲುವಾಗಿಯೇ ಒಳಿತನ್ನು ಬಿತ್ತುತ್ತದೆ. ಓದುಗರ ಪ್ರೀತಿಪಾತ್ರವಾದ ಈ ಪುಸ್ತಕ ಬಹು ಬೇಗ ಎರಡನೇ ಮುದ್ರಣ ಕಂಡಿದೆ. ಮಕ್ಕಳು ಹಿರಿಯರೆಲ್ಲರೂ ಓದಿ ಆನಂದಿಸಬಹುದಾದ ಕಾದಂಬರಿಯನ್ನು ಗುಂಡು ರಾವ್ ದೇಸಾಯಿಯವರು ನೀಡಿದ್ದಾರೆ. ●